Spl.C: 46/2022
PW:01 CW:01

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ವಿಶೇಷ ಪ್ರಕರಣ ಸಂಖ್ಯೆಃ 46/2022

| | |
|---|---|
| PW | 01 |
| CW | 01 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 20.01.2026.

| | | |
|---|---|---|
| ಸಾಕ್ಷಿಯ ಹೆಸರು | : | ನಾರಾಯಣಪ್ಪ |
| ತಂದೆಯ ಹೆಸರು | : | ನರಸಿಂಹಪ್ಪ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕೆಂಕರೆ ಗ್ರಾಮ , ಗೌರಿಬಿದನೂರು ತಾಲ್ಲೂಕು |

**ಮುಖ್ಯ ವಿಚಾರಣೆಃ ಮಾನ್ಯ ಎಸ್.ಪಿ.ಪಿ. ರವರಿಂದಃ**

ನನ್ನ ತಮ್ಮನಾದ ನಾಗಪ್ಪ ಇವರು ಅನಾರೋಗ್ಯದಿಂದ 2018 ರಲ್ಲಿ ಮೃತಪಟ್ಟಿದ್ದು ಅವರ ಹೆಸರಿನಲ್ಲಿ ಇದ್ದ ಸನಂ.83 ರ ಖಾತೆಯನ್ನು ಆತನ ಹೆಂಡತಿ ನಾಗಮ್ಮನ ಹೆಸರಿಗೆ ಫವತಿ ಖಾತೆ ಮಾಡಿಸುವಂತೆ ಕಾರ್ಯದರ್ಶಿ ಆದ ಅಮರ್ ನಾರಾಯಣ್ (ಆರೋಪಿ) ಇವರನ್ನು ಕೇಳಿದಾಗ ಆರೋಪಿ 15,000/- ರೂ. ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ . ಆಗ ನಾನು ಅಷ್ಟೊಂದು ಹಣ ಕೊಡಲು ಆಗುವುದಿಲ್ಲ 2000/- ರೂ. ಹಣ ಕೊಡುವುದಾಗಿ ಹೇಳಿ ಮುಖಂಡವಾಗಿ 500/- ರೂ.ಹಣವನ್ನು ಆರೋಪಿಗೆ ನೀಡಿರುತ್ತೇನೆ . ನಂತರ ನನ್ನ

ಸ್ನೇಹಿತರಾದ ತಿಪ್ಪಣ್ಣ (ಚಾಸಾ.4) ಇವರ ಫೋನ್ ಮೂಲಕ ಲೋಕಾಯುಕ್ತ ಪೊಲೀಸ್ ಗೆ ಕರೆ ಮಾಡಿರುತ್ತೇವೆ . ಚಾಸಾ.4 ಇವರು ತಾಲ್ಲೂಕು ಕಚೇರಿಯ ಬಳಿ ಸಣ್ಣದಾಗಿ ಕಚೇರಿ ಇಟ್ಟುಕೊಂಡಿದ್ದು ಅಲ್ಲಿಗೆ ಲೋಕಾಯುಕ್ತ ಕಚೇರಿಯವರು ಬಂದು ವಿಚಾರಿಸಿದ್ದು ನಂತರ ಲೋಕಾಯುಕ್ತ ಕಚೇರಿಗೆ ಬರುವಂತೆ ತಿಳಿಸಿರುತ್ತಾರೆ . ನಂತರ ನಾನು ಪೊಲೀಸ್ ಕಚೇರಿಗೆ ಬಂದು ಒಂದು ಅರ್ಜಿಯನ್ನು ನೀಡಿದ್ದು ಅದಕ್ಕೆ ಸಹಿ ಮಾಡಿರುತ್ತೇನೆ . ಸಾಕ್ಷಿದಾರರು ತಾನು ನೀಡಿದ ದೂರು , ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 , ನಿಪಿ.1 (ಎ) ಎಂದು ಗುರುತಿಸಲಾಯಿತು.

2. ನಂತರ ಪೊಲೀಸ್ ಕಚೇರಿಗೆ ಒಬ್ಬ ಮುಸ್ಲಿಂ ಅಧಿಕಾರಿ ಹಾಗೂ ಮಂಜುನಾಥ್ ಎಂಬುವವರು ಬಂದಿದ್ದು ಮುಸ್ಲಿಂ ಅಧಿಕಾರಿ ಹೆಸರು ನನಗೆ ತಿಳಿದಿಲ್ಲ . ನಂತರ ಕಚೇರಿಯಲ್ಲಿ 1500/- ರೂ. ನಗದು ಹಣವನ್ನು ಮಂಜುನಾಥ್ ಇವರು ಪೊಲೀಸರ ವಶಕ್ಕೆ ನೀಡಿದ್ದು ಅದಕ್ಕೆ ಪುಡಿ ಲೇಪನ ಮಾಡಿರುತ್ತಾರೆ . ನಂತರ ಪೊಲೀಸರು 1500/- ರೂ. ಹಣವನ್ನು ಆರೋಪಿಗೆ ನೀಡಿ ನನ್ನ ಬಲಗೈ ನಿಂದ ತಲೆ ಸವರಿಕೊಳ್ಳುವ ಮೂಲಕ ಸಿಗ್ನಲ್ ಕೊಡಲು ತಿಳಿಸಿರುತ್ತಾರೆ . ನಂತರ ನಾವೆಲ್ಲರೂ ತಿಪ್ಪಣನವರ ಕಚೇರಿಯ ಬಳಿ ಹೋಗಿದ್ದು ನಂತರ ಲಂಚದ ಹಣವನ್ನು ಆರೋಪಿಗೆ ಕೊಡಲು ಅವರ ಕೊಠಡಿಯ ಬಳಿ ಹೋದಾಗ ಆರೋಪಿ 2 ದಿವಸಗಳ ಕಾಲ ರಜೆ ಇರುವ ವಿಚಾರ ತಿಳಿದು ಬಂದಿರುತ್ತದೆ . ನಂತರ ಲೋಕಾಯುಕ್ತ ಕಚೇರಿಗೆ ಹಣವನ್ನು ವಾಪಸ್ಸು ನೀಡಿರುತ್ತೇವೆ . ನಂತರ ಲೋಕಾಯುಕ್ತ ಕಚೇರಿಯಲ್ಲಿ ವಿಚಾರಣೆ ಮಾಡಿದ್ದು ನಾನು ಆ ಸಮಯದಲ್ಲಿ ಸಹಿ ಮಾಡಿರುತ್ತೇನೆ .

**(ಈ ಹಂತದಲ್ಲಿ ಮಾನ್ಯ ಎಸ್ ಪಿ ಪಿ ರವರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಎಸ್ ಪಿ ಪಿ ರವರಿಂದಃ</u>**

3. ನಾನು ದೂರು ಕೊಡುವ ಪೂರ್ವದಲ್ಲಿ ದಿಃ08.08.2018 ರಂದು ಚಾಸಾ.4 ನವರ ಕಚೇರಿಗೆ ಭೇಟಿ ನೀಡಿದ್ದೆನು ಎಂದರೆ ಸರಿ . ನಾನು ಚಾಸಾ.4 ನವರ ಬಳಿ ವಿಚಾರ ತಿಳಿಸಿದಾಗ ಚಾಸಾ.4 ನವರು ತಮ್ಮ ಫೋನ್ ನಿಂದ ಆರೋಪಿಗೆ ಕರೆ ಮಾಡಿದಾಗ ಆರೋಪಿ ನಾನು ಸಲ್ಲಿಸಿದ ಖಾತಾ ಅರ್ಜಿಗೆ ಸಂಬಂಧಿಸಿದಂತೆ ಉಳಿಕೆ 1500/- ರೂ. ಹಣ ನೀಡಿದ್ದಲ್ಲಿ ಖಾತೆ ಮಾಡುವುದಾಗಿ ಫೋನ್ ಮೂಲಕ ತಿಳಿಸಿದ್ದರು ಎಂದರೆ ಸರಿ . ಆರೋಪಿ ಫೋನ್ ಮೂಲಕ 1500/- ರೂ. ಉಳಿಕೆ ಲಂಚಕ್ಕೆ ಬೇಡಿಕೆ ಇಟ್ಟಿದ್ದನ್ನು ಚಾಸಾ.4 ನವರು ತಮ್ಮ ಫೋನ್ ನಲ್ಲಿ ರೆಕಾರ್ಡ್ ಮಾಡಿಕೊಂಡರು ಎಂದರೆ ಸರಿ . ಆರೋಪಿಗೆ ಲಂಚ ಕೊಡಲು ಇಷ್ಟ ಇಲ್ಲದಿದ್ದ ಕಾರಣ ನಾನು ಹಾಗೂ ಚಾಸಾ.4 ದೂರು ದಾಖಲಿಸಲು ಎ ಸಿ ಬಿ ಕಚೇರಿಗೆ ಬಂದಿರುತ್ತೇವೆ ಎಂದರೆ ಸರಿ . ನಂತರ ಎ ಸಿ ಬಿ ಕಚೇರಿಯಲ್ಲಿ ಚಾಸಾ.4 ರವರ ಮೊಬೈಲ್ ಫೋನ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದನ್ನು ಪೊಲೀಸರ ಮುಂದೆ ಹಾಜರುಪಡಿಸಿದ್ದೆವು ಎಂದರೆ ಸರಿ .

4. ನಂತರ ಎ ಸಿ ಬಿ ಪೊಲೀಸರು ಕಚೆರರಿಗೆ ಪ್ರಾಯೋಗಿಕ ಪಂಚನಾಮೆ ಕ್ರಮ ಜರುಗಿಸಲು ಇಬ್ಬರು ಸರ್ಕಾರಿ ಅಧಿಕಾರಿಗಳಾದ ಮಂಜುನಾಥ್ (ಚಾಸಾ.2) ಹಾಗೂ ಅಯ್ಯುಬ್ ಅಬ್ದುಲ್ಲಾ (ಚಾಸಾ.3) ಇವರನ್ನು ಕರೆಸಿಕೊಂಡರು ಎಂದರೆ ಸರಿ . ತಿಪ್ಪಣ್ಣ ನ

ಮೊಬೈಲ್ ನಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಚಾಸಾ.2 ಮತ್ತು 3 ರವರಿಗೆ ಕೇಳಿಸಿ ಸಂಭಾಷಣೆಯನ್ನು ಯಥಾವತ್ತಾಗಿ ಪ್ರಾಯೋಗಿಕ ಪಂಚನಾಮೆಯಲ್ಲಿ ಲಿಪಿಕರಣ ಮಾಡಿರುತ್ತಾರೆ ಎಂದರೆ ಸರಿ . ನಂತರ ರೆಕಾರ್ಡ್ ಮಾಡಿದ್ದ ಸಂಭಾಷಣೆಯನ್ನು ಕಂಪ್ಯೂಟರ್ ಮೂಲಕ ಸಿಡಿ ಗೆ ವರ್ಗಾಯಿಸಿರುತ್ತಾರೆ ಎಂದರೆ ಸರಿ . ನಂತರ ಆರೋಪಿಗೆ ಕೊಡಲು ತಂದಿದ್ದ 500/- ರೂ. ಮುಖಬೆಲೆಯ 2 ನೋಟುಗಳು ಹಾಗೂ 100 ರೂ. ಮುಖಬೆಲೆಯ 5 ನೋಟುಗಳು ಒಟ್ಟು 1500/- ರೂ.ಗಳನ್ನು ಪೊಲೀಸರ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ . ಸದರಿ ನೋಟುಗಳ ಮೇಲೆ ಪೊಲೀಸ್ ಸಿಬ್ಬಂಧಿ ಫಿನಾಫ್ತಲಿನ್ ಪುಡಿ ಲೇಪನ ಮಾಡಿರುತ್ತಾರೆ ಎಂದರೆ ಸರಿ .

5. ಸದರಿ ನೋಟುಗಳನ್ನು ಚಾಸಾ.2 ರವರು ಎಣಿಸಿ ನೋಟುಗಳ ವಿವರಗಳನ್ನು ಹೇಳಿದ್ದು ಅದನ್ನು ಚಾಸಾ.3 ರವರು ಒಂದು ಬಿಳಿ ಹಾಳೆಯ ಮೇಲೆ ಬರೆದಿರುತ್ತಾರೆ ಎಂದರೆ ಸರಿ . ಸದರಿ ಬಿಳಿ ಹಾಳೆಯ ಮೇಲೆ ನಾನು , ಚಾಸಾ.2 , 3 ಹಾಗೂ ಇನ್ಸ್‌ಪೆಕ್ಟರ್ ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ . ಸಾಕ್ಷಿದಾರರು ನೋಟುಗಳ ವಿವರ ಪಟ್ಟಿ , ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 , ನಿಪಿ.2 (ಎ) ಎಂದು ಗುರುತಿಸಲಾಯಿತು .

6. ಪೊಲೀಸರು ಕಚೇರಿಯಲ್ಲಿ ಸೋಡಿಯಂ ಕಾರ್ಬೊನೇಟ್ ದ್ರಾವಣವನ್ನು ತಯಾರಿಸಿರುತ್ತಾರೆ ಎಂದರೆ ಸರಿ . ಸದರಿ ದ್ರಾವಣದಲ್ಲಿ ಚಾಸಾ.2 ರವರ ಬೆರಳುಗಳನ್ನು

ತೊಳೆಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿದ್ದು ಅದನ್ನು ಪೊಲೀಸರು ಒಂದು ಬಾಟಲ್ ಗೆ ಹಾಕಿ ನಮ್ಮ ಸಮಕ್ಷಮ ಜಪ್ತಿಪಡಿಸಿರುತ್ತಾರೆ ಎಂದರೆ ಸರಿ . ಯಾವುದೇ ವ್ಯಕ್ತಿ ಫಿನಾಫ್ತಲಿನ್ ಪುಡಿ ಲೇಪನ ಮಾಡಿದ ನೋಟುಗಳನ್ನು ಮುಟ್ಟಿ ದ್ರಾವಣದಲ್ಲಿ ತೊಳೆಸಿದಾಗ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗುವುದಾಗಿ ಪೊಲೀಸರು ನಮಗೆ ತಿಳಿಸಿದ್ದರು ಎಂದರೆ ಸರಿ . ಎ ಸಿ ಬಿ ಕಚೇರಿಯಲ್ಲಿ ಪ್ರಾಯೋಗಿಕ ಪಂಚನಾಮೆ ಪ್ರಕ್ರಿಯೆ ಸಂಜೆ 7.00 ಗಂಟೆಗೆ ಮುಗಿದಿರುತ್ತದೆ ಎಂದರೆ ಸರಿ . ಆ ಸಮಯದಲ್ಲಿ ಚಾಸಾ.4 ರವರ ಫೋನ್ ನಿಂದ ಆರೋಪಿಗೆ ಫೋನ್ ಮಾಡಲು ಪ್ರಯತ್ನಿಸಿದಾಗ ಆರೋಪಿಯ ಫೋನ್ ಸಿಕ್ಕಿರುವುದಿಲ್ಲ ಎಂದರೆ ಸರಿ . ಪ್ರಾಯೋಗಿಕ ಪಂಚನಾಮೆ ಪ್ರಕ್ರಿಯೆಯನ್ನು 10 ನೇ ತಾರಿಖೀನಂದು ಮಾಡಿದ್ದು 11 ಹಾಗೂ 12 ತಾರೀಖಿನಂದು ಸಾರ್ವತ್ರಿಕ ರಜೆ ಇದ್ದ ಕಾರಣ 13 ನೇ ತಾರೀಖಿನಂದು ಬರುವಂತೆ ಪೊಲೀಸರು ತಿಳಿಸಿದ್ದರು ಎಂದರೆ ಸರಿ . ನಂತರ ಪೊಲೀಸರು ನಮ್ಮ ಸಮಕ್ಷಮ ಕಚೇರಿಯಲ್ಲಿ ಇದ್ದ ಒಂದು ಬೀರುವಿನಲ್ಲಿ ಪುಡಿ ಲೇಪನ ಮಾಡಿದ ನೋಟುಗಳನ್ನು ಇಟ್ಟಿರುತ್ತಾರೆ ಎಂದರೆ ಸರಿ . ಈ ಎಲ್ಲಾ ವಿಚಾರಗಳನ್ನು ಗೌಪ್ಯವಾಗಿ ಇಡುವಂತೆ ನನಗೆ ಹಾಗೂ ಸಾಕ್ಷಿದಾರರಿಗೆ ಸೂಚಿಸಿದ್ದರು ಎಂದರೆ ಸರಿ .

7. ಆ ಸಮಯದಲ್ಲಿ ಚಾಸಾ.4 ರವರು 13 ನೇ ತಾರೀಖಿನಂದು ನಾನು ಗೌರಿಬಿದನೂರಿನಲ್ಲಿ ಇರುತ್ತೇನೆ ಎಂದು ತಿಳಿಸಿದ್ದರು ಎಂದರೆ ಸರಿ . ಪೊಲೀಸರು ಕಚೇರಿಯಲ್ಲಿ ಪ್ರಾಯೋಗಿಕ ಪಂಚನಾಮೆ ಬರೆದಿದ್ದು ಅದಕ್ಕೆ ನಾನು , ಪಂಚಸಾಕ್ಷಿದಾರರು , ಚಾಸಾ.4 ಹಾಗೂ ಇನ್ಸ್ ಪೆಕ್ಟರ್ ರವರು ಸಹಿ ಮಾಡಿರುತ್ತೇವೆ ಎಂದರೆ ಸರಿ . ಸಾಕ್ಷಿದಾರರು ಪ್ರಾಯೋಗಿಕ

ಪಂಚನಾಮೆ , ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.3 , ನಿಪಿ.3 (ಎ) ಎಂದು ಗುರುತಿಸಲಾಯಿತು . ದಿಃ13.08.2018 ರಂದು ಬೆ.10.30 ಕ್ಕೆ ನಾನು ಎ ಸಿ ಬಿ ಕಚೇರಿಗೆ ಹೋಗಿದ್ದು ಪೊಲೀಸರು ನನ್ನ , ಚಾಸಾ.2 ಮತ್ತು 3 ರವರ ಸಮಕ್ಷಮ ಕಚೇರಿಯ ಬೀರುವಿನಲ್ಲಿ ಇಟ್ಟಿದ್ದ ಲಂಚದ ಹಣವನ್ನು ಹೊರಗೆ ತೆಗೆದಿರುತ್ತಾರೆ ಎಂದರೆ ಸರಿ . ಪುನಹಃ ಸದರಿ ಲಂಚದ ಹಣಕ್ಕೆ ತೆಳುವಾಗಿ ಫಿನಾಫ್ತಲಿನ್ ಪುಡಿ ಲೇಪನ ಮಾಡಿರುತ್ತಾರೆ ಎಂದರೆ ಸರಿ . ಪುಡಿ ಲೇಪನ ಮಾಡಿದ ಹಣವನ್ನು ಚಾಸಾ.2 ರವರು ನನ್ನ ಪ್ಯಾಂಟ್ ನ ಬಲಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ ಎಂದರೆ ಸರಿ . ಆರೋಪಿಯನ್ನು ಭೇಟಿ ಮಾಡಿದಾಗ ಪುಡಿ ಲೇಪನ ಮಾಡಿದ ಹಣವನ್ನು ಆರೋಪಿಗೆ ನೀಡಿ ಪೊಲೀಸರಿಗೆ ಸಿಗ್ನಲ್ ನೀಡಬೇಕು ಎಂದು ನನಗೆ ಸೂಚಿಸಿದ್ದರು ಎಂದರೆ ಸರಿ . ನಾನು ಆರೋಪಿಗೆ ಲಂಚದ ಹಣವನ್ನು ಕೊಡಲು ಹೋಗುವಾಗ ಚಾಸಾ.2 ರವರು ನನ್ನನ್ನು ಹಿಂಬಾಲಿಸಿಕೊಂಡು ಹೋಗುವಂತೆ ಅವರಿಗೂ ಸೂಚಿಸಿದ್ದರು ಎಂದರೆ ಸರಿ .

8. ಅದೇ ರೀತಿ ನನ್ನ ಹಾಗೂ ಆರೋಪಿಯ ನಡುವೆ ಆಗುವ ಸಂಭಾಷಣೆಯನ್ನು ಗಮನಿಸುವಂತೆ ಚಾಸಾ.2 ರವರಿಗೆ ಸೂಚಿಸಿದ್ದು ಹಣ ಕೊಟ್ಟ ಬಗ್ಗೆ ನಾನು ಸಿಗ್ನಲ್ ಕೊಡಲು ಆಗದಿದ್ದಲ್ಲಿ ಚಾಸಾ.2 ರವರೇ ಪೊಲೀಸರಿಗೆ ಸಿಗ್ನಲ್ ನೀಡುವಂತೆ ತಿಳಿಸಿದ್ದರು ಎಂದರೆ ಸರಿ . ಎ ಸಿ ಬಿ ಪೊಲೀಸರು ಲಂಚದ ಹಣವನ್ನು ಎಲ್ಲಿ ತೆಗೆದುಕೊಂಡು ಬರಲು ಆರೋಪಿ ತಿಳಿಸಿರುವುದಾಗಿ ನನ್ನನ್ನು ಕೇಳಿದಾಗ ನಾನು ಪೊಲೀಸರ ಮುಂದೆ ಅದೇ ದಿನ ಬೆ.07.35 ಕ್ಕೆ ಆರೋಪಿಗೆ ಫೋನ್ ಮಾಡಿದಾಗ ಲಂಚದ ಹಣವನ್ನು ಗೌರಿಬಿದನೂರು ತಾಲ್ಲೂಕು

ಕಚೇರಿಯ ಬಳಿ ತರುವಂತೆ ತಿಳಿಸಿದ ವಿಚಾರವನ್ನು ಪೊಲೀಸರಿಗೆ ಹೇಳಿದ್ದೆನು ಎಂದರೆ ಸರಿ . ಪೊಲೀಸರು ಆ ಸಮಯದಲ್ಲಿ ಒಂದು ಸೋನಿ ವಾಯ್ಸ್ ರೆಕಾರ್ಡರನ್ನು ನನ್ನ ಜೇಬಿನಲ್ಲಿ ಇಟ್ಟು ನನ್ನ ಹಾಗೂ ಆರೋಪಿಯ ನಡುವೆ ಆಗುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳುವಂತೆ ತಿಳಿಸಿದ್ದರು ಎಂದರೆ ಸರಿ . ನಿಪಿ.3 ಪಂಚನಾಮೆ ಹಾಗೂ ಮುಂದುವರೆದ ಪಂಚನಾಮೆ ಮಾಡಿದ ಸಮಯದಲ್ಲಿ ವಿವಿಧ ಹಂತಗಳಲ್ಲಿ ಪೊಲೀಸರು ಫೋಟೋ ತೆಗೆದಿದ್ದರು ಎಂದರೆ ಸರಿ. ಸಾಕ್ಷಿದಾರರು ಪ್ರಾಯೋಗಿಕ ಪಂಚನಾಮೆ ಹಾಗೂ ಮುಂದುವರೆದ ಪಂಚನಾಮೆ ಸಮಯದಲ್ಲಿ ತೆಗೆದ ಒಟ್ಟು 14 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕಲಂ.65 (ಬಿ) ಪ್ರಮಾಣ ಪತ್ರ ಹಾಜರುಪಡಿಸದೇ ಇರುವ ಕಾರಣ ನಿಶಾನೆಯನ್ನಾಗಿ ಗುರುತಿಸಲು ಶ್ರೀ. ಹೆಚ್ ಆರ್ ವಿ ವಕೀಲರು ತಕರಾರು ಮಾಡಿದ್ದು ಅವರ ತಕರಾರಿಗೆ ಒಳಪಟ್ಟು ಅವುಗಳನ್ನು ನಿಪಿ.4 ರಿಂದ 17 ಎಂದು ಗುರುತಿಸಲಾಯಿತು.

9. ಪೊಲೀಸರು ಮುಂದುವರೆದ ಪಂಚನಾಮೆ ಮಾಡಿ ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿ . ಸಾಕ್ಷಿದಾರರು ಮುಂದುವರೆದ ಪಂಚನಾಮೆ , ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.8 , ನಿಪಿ.18(ಎ) ಎಂದು ಗುರುತಿಸಲಾಯಿತು. ನಂತರ ಮಧ್ಯಾಹ್ನ 12.30 ಕ್ಕೆ ನಾವೆಲ್ಲರೂ ಎ ಸಿ ಬಿ ಕಚೇರಿಯಿಂದ ಹೊರಟು ಗೌರಿಬಿದನೂರು ತಾಲ್ಲೂಕು ಕಚೇರಿಯ ಕಡೆ ಹೋಗಿರುತ್ತೇವೆ ಎಂದರೆ ಸರಿ . ಆಗ ಇನ್ಸ್ ಪೆಕ್ಟರ್ ಇವರು ನನ್ನ ಮೊಬೈಲ್ ನಿಂದ ಆರೋಪಿಗೆ ಕರೆ ಮಾಡಿ ಆರೋಪಿ ಎಲ್ಲಿ ಇರುತ್ತಾರೆ ಎಂಬುವುದನ್ನು ಕೇಳುವಂತೆ ತಿಳಿಸಿದ್ದರು ಎಂದರೆ ಸರಿ . ಆ ಸಮಯದಲ್ಲಿ ಆರೋಪಿಯ ಮೊಬೈಲ್ ಗೆ

ಮಾಡಿದ ಕರೆಯನ್ನು ಒಬ್ಬ ಮಹಿಳೆ ಸ್ವೀಕರಿಸಿ ಆರೋಪಿ ಮೊಬೈಲ್ ಫೋನ್ ನ್ನು ಮನೆಯಲ್ಲಿ ಬಿಟ್ಟು ಹೋಗಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿ . ನಂತರ ಎ ಸಿ ಬಿ ಪೊಲೀಸರು ಆರೋಪಿ ಎಲ್ಲಿ ಹೋಗಿರುತ್ತಾರೆ ಎಂಬ ಬಗ್ಗೆ ಗೌಪ್ಯವಾಗಿ ಮಾಹಿತಿ ಸಂಗ್ರಹಿಸಿದಾಗ ಆರೋಪಿ ಮೂರು ದಿನ ರಜೆಯ ಮೇಲೆ ಹೋಗಿರುವುದು ರಜೆಯ ಮೇಲೆ ಹೋಗಿರುವುದು ತಿಳಿದು ಬಂತು ಎಂದರೆ ಸರಿ .

10. ನಂತರ ನಾವು ಗೌರಿಬಿದನೂರಿನಿಂದ ವಾಪಸ್ಸು ಎ ಸಿ ಬಿ ಕಚೇರಿಗೆ ಸಂಜೆ 4.00 ಗಂಟೆಗೆ ಬಂದಿರುತ್ತೇವೆ ಎಂದರೆ ಸರಿ . ಪೊಲೀಸರು ಪುಡಿಲೇಪನ ಮಾಡಿದ ಲಂಚದ ಹಣವನ್ನು ಬೀರುವಿನಲ್ಲಿ ಭದ್ರವಾಗಿ ಇಟ್ಟರು ಎಂದರೆ ಸರಿ . ಈ ಎಲ್ಲಾ ವಿಚಾರಗಳನ್ನು ಗೌಪ್ಯವಾಗಿ ಇಡುವಂತೆ ಪೊಲೀಸರು ತಿಳುವಳಿಕೆ ನೀಡಿದ್ದರು ಎಂದರೆ ಸರಿ . ನಂತರ ಎ ಸಿ ಬಿ ಕಚೇರಿಯಲ್ಲಿ ಟ್ರಾಪ್ ಮುಂದೂಡಿದ ಪಂಚನಾಮೆಯನ್ನು ಪೊಲೀಸರು ಜರುಗಿಸಿ ನನ್ನ ಹಾಗೂ ಪಂಚರ ಸಹಿಯನ್ನು ಪಡೆದಿದ್ದು ಸಾಕ್ಷಿಯು ಟ್ರಾಪ್ ಮುಂದೂಡಿದ ಪಂಚನಾಮೆ , ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.19 , ನಿಪಿ.19 (ಎ) ಎಂದು ಗುರುತಿಸಲಾಯಿತು.

11. ಪುನಹಃ ದಿಃ25.08.2018 ರಂದು ನಾನು ತಾಲ್ಲೂಕು ಕಚೇರಿಯ ಬಳಿ ಹೋಗಿದ್ದೆನು ಎಂದರೆ ಸರಿ . ಆ ದಿನ ಮ.1.00 ಗಂಟೆಗೆ ಆರೋಪಿ ನನ್ನನ್ನು ನೋಡಿ ಕರೆದು ಮಾತನಾಡಿಸಿ ನಾನು ಎ ಸಿ ಬಿ ಪೊಲೀಸರ ಬಳಿ ಹೋದ ವಿಚಾರ ನನಗೆ ತಿಳಿದು ಬಂದಿದ್ದು

ನಿಮ್ಮ ಕೆಲಸ ಮಾಡಿಕೊಡುತ್ತೇನೆ ಯಾರ ಬಳಿಯೂ ಹೋಗುವ ಅವಶ್ಯಕತೆ ಇಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿ . ಆರೋಪಿ ಆ ದಿನ ನನಗೆ ಏಕಾಏಕಿ ಸಿಕ್ಕಿದ್ದ ಕಾರಣ ನನ್ನ ಹಾಗೂ ಆರೋಪಿಯ ಆದ ನಡುವೆ ಆದ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳಲು ಆಗಿರುವುದಿಲ್ಲ ಎಂದರೆ ಸರಿ . ನನಗೆ ಆ ದಿನ ಆರೋಗ್ಯ ಸರಿ ಇಲ್ಲದಿದ್ದ ಕಾರಣ ತಕ್ಷಣ ಎ ಸಿ ಬಿ ಕಚೇರಿಗೆ ಬಂದು ವಿಚಾರ ತಿಳಿಸಲು ಆಗದಿದ್ದ ಕಾರಣ ನಾನು ದಿಃ30.08.2018 ರಂದು ಎ ಸಿ ಬಿ ಕಚೇರಿಗೆ ಬಂದು ಸದರಿ ವಿಚಾರ ತಿಳಿಸಿದ್ದೆನು ಎಂದರೆ ಸರಿ. ದಿಃ30.08.2018 ರಂದು ಟ್ರಾಪ್ ವಿಫಲ ಆದ ಕಾರಣ ಪೊಲೀಸರು ಕಚೇರಿಗೆ ಚಾಸಾ.2 ಮತ್ತು 3 ರವರನ್ನು ಬರಮಾಡಿಕೊಂಡು ಬೀರುವಿನಲ್ಲಿ ಇಟ್ಟಿದ್ದ ಹಣವನ್ನು ನನಗೆ ವಾಪಸ್ಸು ನೀಡಿರುತ್ತಾರೆ ಎಂದರೆ ಸರಿ . ಅದೇ ಸಮಯದಲ್ಲಿ ಪೊಲೀಸರು ಕಚೇರಿಯಲ್ಲಿ ಒಂದು ಪಂಚನಾಮೆ ಜರುಗಿಸಿದ್ದು ಅದಕ್ಕೆ ನಾನು , ಪಂಚರು ಸಹಿ ಮಾಡಿರುತ್ತೇವೆ ಎಂದರೆ ಸರಿ .

12. ಸಾಕ್ಷಿದಾರರು ಸದರಿ ಪಂಚನಾಮೆ , ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.20, ನಿಪಿ.20 (ಎ) ಎಂದು ಗುರುತಿಸಲಾಯಿತು. ಪೊಲೀಸರು ನಾನು ನೀಡಿದ 1500/- ರೂ. ಹಣದ ಫೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿ . ಸಾಕ್ಷಿದಾರರು ಸದರಿ ಫೋಟೋವನ್ನು ನೋಡಿ ಗುರುತಿಸಿದ್ದು ಕಲಂ65 (ಬಿ) ಸರ್ಟಿಫಿಕೇಟ್ ಹಾಜರುಪಡಿಸದ ಕಾರಣ ಅದನ್ನು ನಿಶಾನೆಯನ್ನಾಗಿ ಗುರುತಿಸಲು ಆಗುವುದಿಲ್ಲ ಎಂದು ತಕರಾರು ಮಾಡಿದ್ದು ಅವರ ತಕರಾರಿಗೆ ಒಳಪಟ್ಟು ಅದನ್ನು ನಿಪಿ.21 ಎಂದು ಗುರುತಿಸಲಾಯಿತು. ನಾನು ಹಣವನ್ನು ವಾಪಸ್ಸು ಪಡೆದ ಬಗ್ಗೆ ಒಂದು ಸ್ವೀಕೃತಿ ದಾಖಲೆಗೆ ಸಹಿ

ಮಾಡಿದ್ದು ಅದನ್ನು ಸಾಕ್ಷಿದಾರರು ಗುರುತಿಸಿದ ಕಾರಣ ಅದನ್ನು ನಿಪಿ.22 , ನಿಪಿ.22 (ಎ) ಎಂದು ಗುರುತಿಸಲಾಯಿತು. ನಾನು ಅದೇ ದಿನ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ .

**ಪಾಟೀ ಸವಾಲುಃ ಆರೋಪಿ ಪರ ಶ್ರೀ  ಹೆಚ್ ಆರ್ ವಿ ವಕೀಲರಿಂದಃ**

ಶ್ರೀ  ಹೆಚ್ ಆರ್ ವಿ ವಕೀಲರು ಸಮಯಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 20.01.2026 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

sd/-

**(ಎಸ್. ಶ್ರೀಧರ)**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.